**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**
**ಸಿ.ಸಿ ನಂಃ 734/ 2019**

| | | |
|---|---|---|
| ಸಾಕ್ಷಿಯ ಹೆಸರುಃ | ಬಸವರಾಜ | ಪ್ರಾಸಾಃ 03 |
| ತಂದೆ/ಗಂಡನ ಹೆಸರುಃ | ಬಾಲಪ್ಪ ಪ್ಯಾಟಿ | ಚಾಸಾಃ 06 |
| ವಯಸ್ಸುಃ | 36 ವರ್ಷ | ದಿಃ 06-02-2023 |
| ಉದ್ಯೋಗಃ | ಖಾಸಗಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ದಂತಾಪೂರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾಃ 1, 4, 5 ಮತ್ತು 7 ರವರ ಪರಿಚಯ ಇದೆ. ನನಗೆ ಆರೋಪಿಯ ಪರಿಚಯ ಇದೆ. ದಿಃ 20.4.2019 ರಂದು ನನ್ನ ಸಂಬಂಧಿಕರು ಒಬ್ಬರು ಚಂದ್ರಿಕಿ ಗ್ರಾಮದಲ್ಲಿ ಮರಣ ಹೊಂದಿದ್ದು ಮರಣಕ್ಕೆಂದು ನಾನು ಮತ್ತು ಚಾಸಾ 5 ರವರು ಸದರಿ ದಿನದಂದು ಚಂದ್ರಿಕಿ ಗ್ರಾಮಕ್ಕೆ ಹೋಗಿದ್ದೆವು. ನಂತರ ಸಾಃ 5.30 ಗಂಟೆ ಸಮಯಕ್ಕೆ ನಾವು ಚಾಸಾ ಃ 1 ರವರೊಂದಿಗೆ ಮಾತನಾಡಿ ಕೊಂಡು ಬರಲು ಚಾಸಾ 1 ರವರ ಮನೆಯ ಬಳಿ ಹೋದಾಗ ಆರೋಪಿಯು ಸರಾಯಿ ಕುಡಿದು ಬಂದು ಚಾಸಾ 1 ರವರ ಮನೆಯಲ್ಲಿ ಜಗಳ ಮಾಡುವದು ನಮಗೆ ಕಂಡು ಬಂದಿರುತ್ತದೆ. ನಾವು ಸ್ಥಳಕ್ಕೆ ಹೋದಾಗ ಆರೋಪಿಯು ಚಾಸಾ 1 ರವರನ್ನು ಉದ್ದೇಶಿಸಿ ಬೋಸಡಿ, ರಂಡಿ ಸೂಳೆ ನಿಮ್ಮನ್ನು ಇವತ್ತು ಜೀವ ಸಹಿತ ಬಿಡುವುದಿಲ್ಲ ಎಂದು ಆರೋಪಿಯು ಅವಾಚ್ಯ ಶಬ್ದದಿಂದ ಬೈದಿರುತ್ತಾನೆ. ನಂತರ ಆರೋಪಿಯು ಚಾಸಾ 1 ರವರ ಕೂದಲು ಹಿಡಿದು ಬಗ್ಗಿಸಿ ಚಾಸಾ 1 ರವರ ಬೆನ್ನಿಗೆ ಹೊಡೆದಿರುತ್ತಾನೆ.

ನನ್ನ ತಾಯಿಗೆ ಯಾಕೆ ಹೊಡೆಯುತ್ತಿ ಎಂದು ಚಾಸಾ 4 ರವರು ಆರೋಪಿಯಲ್ಲಿ ಕೇಳಿದಾಗ ಆರೋಪಿಯು ಚಾಸಾ 4 ರವರ ಕಪಾಳಕ್ಕೆ ಹೊಡೆದಿರುತ್ತಾನೆ ಆಗ ಚಾಸಾ 4 ರವರು ನೆಲಕ್ಕೆ ಬಿದ್ದಿರುತ್ತಾರೆ. ನಂತರ ಆರೋಪಿಯು ಕಟ್ಟಿಗೆಯಿಂದ ಚಾಸಾ 1 ರವರಿಗೆ ಹೊಡೆದಿರುತ್ತಾನೆ.

ನಂತರ ನಾನು, ಚಾಸಾ 4 ಮತ್ತು 5 ರವರು ಜಗಳವನ್ನು ಬಿಡಿಸಿರುತ್ತೇವೆ. ಜಗಳ ಬಿಟ್ಟು ಹೋಗುವಾಗ ಆರೋಪಿಯು ನಾನು ಮತ್ತು ಚಾಸಾ 5 ರವರು ಇದ್ದ ಕಾರಣ ನೀವು ಇಬ್ಬರು ಇವತ್ತು ಉಳಿದಿದ್ದಿರಿ ಇಲ್ಲವಾದರೆ ನಾನೇ ನನ್ನ ಕೈಯಿಂದ ನಿಮ್ಮನ್ನು ಸಾಯಿಸುತ್ತಿದ್ದೆ ಎಂದು

ಹೇಳಿ ಆರೋಪಿಯು ಚಾಸಾ 1 ಮತ್ತು ಚಾಸಾ 4 ರವರಿಗೆ ಜೀವದ ಬೆದರಿಕೆಯನ್ನು ಹಾಕಿರುತ್ತಾನೆ. ನಂತರ ಆರೋಪಿಯು ಸ್ಥಳವನ್ನು ಬಿಟ್ಟು ಹೋಗಿರುತ್ತಾನೆ. ನಂತರ ನಡೆದ ವಿಷಯವನ್ನು ಚಾಸಾ 1 ರವರು ಚಾಸಾ 7 ರವರಿಗೆ ಪೋನ ಕರೆ ಮಾಡಿ ತಿಳಿಸಿದ್ದು ನಂತರ ಚಾಸಾ 7 ರವರು ಸ್ಥಳದಕ್ಕೆ ಬಂದು ಚಾಸಾ 1 ಮತ್ತು 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮರು ದಿನ ನಾನು ಆರೋಪಿಯ ವಿರುದ್ದ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ಮುಮಾ 1 ನ್ನು ನೋಡಿ ಆರೋಪಿಯು ಹಲ್ಲೆ ಮಾಡಲು ಇದೇ ಕಟ್ಟಿಗೆಯನ್ನು ಬಳಸಿರುತ್ತಾನೆ ಎಂದು ಹೇಳಿ ಮುಮಾ 1 ನ್ನು ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರಃ ಶ್ರೀ ಎಸ್.ಎಸ್.ಪಿ. ವಕೀಲರವರಿಂದಃ</u>**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ.**